O.S.207/2009

PW-1

ದಿ. 16.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ- 4 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಕೆಎಎ ರವರಿಂದಃ-**

1.ದಾವಾ ಸ್ವತ್ತು ಕೊಟ್ಟಿಗೆಹಳ್ಳಿ ಗ್ರಾಮದ ಸರ್ವೆ ನಂ.64 ರ ಒಂದು ಭಾಗ ಎಂದರೆ ಸರಿ. ಸರ್ವೆ ನಂ.64 ರಲ್ಲಿ ಒಟ್ಟು 6 ಎಕರೆ 11 ಗುಂಟೆ ಜಮೀನು ಇರುತ್ತದೆ. ಸರ್ವೆ ನಂ.64 ರಲ್ಲಿರುವ 6 ಎಕರೆ 11 ಗುಂಟೆ ಜಮೀನು ತೋಟಿ ನೌಕರರ ಇನಾಮ್ತಿ ಜಮೀನು ಎಂದರೆ ನನಗೆ ಗೊತ್ತಿಲ್ಲ. ಸರ್ವೆ ನಂ.64 ರಲ್ಲಿ ಬರುವ 6 ಎಕರೆ 11 ಗುಂಟೆ ಜಮೀನು ತೋಟಿ ನೌಕರರ ಇನಾಮ್ತಿ ಜಮೀನು ಅದು ಕರ್ನಾಟಕ ಗ್ರಾಮ ಕಚೇರಿಗಳ ರದ್ದಿಯಾತಿ ಕಾಯ್ದೆ ಅಡಿ ಬರುತ್ತದೆ ಎಂದರೆ ಸರಿಯಲ್ಲ. ಸರ್ವೆ ನಂ.64 ರಲ್ಲಿರುವ 6 ಎಕರೆ 11 ಗುಂಟೆ ಜಮೀನಿನಲ್ಲಿ ತೋಟಿ ನೌಕರರು ಸಾಗುವಳಿ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸರ್ವೆ ನಂ.64 ರಲ್ಲಿರುವ 6 ಎಕರೆ 11 ಗುಂಟೆ ಜಮೀನನ್ನು ಈ ಹಿಂದೆ ತೋಟಿ ನೌಕರರ ಬಾರದುಬಾರ ಉತ್ತಾರಾಧಿಕಾರಿಗಳಿಗೆ ಕರ್ನಾಟಕ ಗ್ರಾಮ ಕಚೇರಿಗಳ ರದ್ದಿಯಾತಿ ಕಾಯ್ದೆ ಅಡಿಯಲ್ಲಿ ಮಂಜೂರು ಮಾಡಿಕೊಟ್ಟಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

2. ಪ್ರತಿವಾದಿಗಳನ್ನು ಸೇರಿಸಿ ಮರು ಮಂಜೂರಾತಿ ಮಾಡಿಕೊಟ್ಟಿದ್ದಾರೋ ಅಥವಾ ಅವರನ್ನು ಬಿಟ್ಟು ಮರು ಮಂಜೂರಾತಿ ಮಾಡಿಕೊಟ್ಟಿದ್ದಾರೋ ಎಂದರೆ ಸಾಕ್ಷಿ ಅದರ ಬಗ್ಗೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನಮ್ಮ ಊರಿನಲ್ಲಿ ತೋಟಿ ಕೆಲಸ ಮಾಡಿಕೊಂಡು ಬರುತ್ತಿದ್ದ ನೌಕರರ ವಾರಸುದಾರರು ಪರಿಶಿಷ್ಟ ಜಾತಿಗೆ ಸೇರಿದವರು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಾನು ವಕ್ಕಲಿಗ ಜನಾಂಗಕ್ಕೆ ಸೇರಿದವನು ಎಂದರೆ ಸರಿ. ನಮಗೆ ಭೂ ಮಂಡಳಿಯವರು ದಾವಾ

ಸ್ವತ್ತನ್ನು ಮಂಜೂರು ಮಾಡುವುದಕ್ಕೂ ಮೊದಲು ಅದನ್ನು ತೋಟಿ ವಂಶಸ್ಥರು ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ತೋಟಿ ವಂಶಸ್ಥರು ನಮ್ಮ ಊರಿನಲ್ಲಿ ಒಂದೇ ಕುಟುಂಬ ಇತ್ತು ಎಂದರೆ ಸರಿ. ನಂತರದ ದಿನಗಳಲ್ಲಿ ನಮ್ಮ ಗ್ರಾಮದಲ್ಲಿ ಅವರ ಮೇಲೆ ಆದಂತಹ ದೌರ್ಜನ್ಯದಿಂದಾಗಿ ಆ ಕುಟುಂಬವೂ ಹಾರೋಹಳ್ಳಿಗೆ ಶಿಫ್ಟ್ ಆದ ಎಂದರೆ ಸರಿಯಲ್ಲ. ಸರ್ವೆ ನಂ.64 ರಲ್ಲಿ ಭೂ ಮಂಡಳಿಯವರು ನನಗೆ ಒಂದು ತುಂಡನ್ನು ಕೊಡುವುದಕ್ಕೂ ಮೊದಲು ತೋಟಿ ಸಿದ್ದಯ್ಯರವರೇ ಆ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದರು ಎಂದರೆ ಸರಿಯಲ್ಲ. ಸಿದ್ದಯ್ಯರವರ ಜಮೀನನ್ನು ನೀವು ಮಾಡುತ್ತಿದ್ರೋ ಅಥವಾ ಬೇರೆಯವರ ಜಮೀನನ್ನು ಮಾಡುತ್ತಿದ್ರೋ ಎಂದರೆ ಸಾಕ್ಷಿಯು ಸಿದ್ದಯ್ಯ ಎನ್ನುವವರು ನಮ್ಮ ಊರಿನಲ್ಲಿ ಇಬ್ಬರು ಇದ್ದಾರೆ ನಾನು ಬೇರೆ ಸಿದ್ದಯ್ಯರ ಜಮೀನು ಮಾಡುತ್ತಿದ್ದೆ ಎಂದು ನುಡಿಯುತ್ತಾರೆ.

3. ತೋಟಿ ವಂಶಸ್ಥರು ಕರ್ನಾಟಕ ಗ್ರಾಮ ಕಚೇರಿಗಳ ರದ್ದಿಯಾತಿ ಕಾಯ್ದೆ ಅಡಿಯಲ್ಲಿ ದಾವಾ ಸರ್ವೆ ನಂಬರ್ ನ ಸಂಪೂರ್ಣ ಜಮೀನನ್ನು ತಮಗೆ ಮರು ಮಂಜೂರಾತಿ ಮಾಡಿಕೊಡಿ ಎಂದು ಎಸಿ ರಾಮನಗರ ರವರಿಗೆ ಸಲ್ಲಿಸಿದ ಅರ್ಜಿಗೆ ನೀವೇನಾದರೂ ತಕರಾರು ಸಲ್ಲಿಸಿದ್ರ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ನಾನು ಯಾವುದೇ ತಕರಾರು ಸಲ್ಲಿಸಿಲ್ಲ ಎಂದು ನುಡಿಯುತ್ತಾರೆ. ನಾನು ಭೂಮಂಡಳಿಯವರ ಮುಂದೆ ಫಾರಂ ನಂ.7 ಅಡಿಯಲ್ಲಿ ಅರ್ಜಿ ಸಲ್ಲಿಸಿರುತ್ತೇನೆ. ನಾನು ಭೂಮಂಡಳಿಯವರ ಮುಂದೆ ಮಂಜೂರಾತಿಗಾಗಿ ಸಲ್ಲಿಸಿದ ಅರ್ಜಿಯಲ್ಲಿ ಸರ್ವೆ ನಂ.64 ರ 1 ಎಕರೆ 23 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಚಕ್ಕುಬಂದಿಯನ್ನು ನಮೂದಿಸಿಲ್ಲ ಎಂದರೆ ಸರಿಯಲ್ಲ. ನಾನು ಭೂಮಂಡಳಿ ರವರ ಮುಂದೆ ವಿಚಾರಣೆಯ ಕಾಲಕ್ಕೆ ಒಂದು ಹೇಳಿಕೆಯನ್ನು ಕೊಟ್ಟಿರುತ್ತೇನೆ. ನನ್ನ ಆ ಹೇಳಿಕೆಯಲ್ಲಿಯೂ ಸಹ ನಾನು 1 ಎಕರೆ 23 ಗುಂಟೆ ಜಮೀನಿನ ಚಕ್ಕುಬಂದಿ ಹೇಳಿಲ್ಲ ಎಂದರೆ ಸರಿಯಲ್ಲ. ಭೂ ಮಂಡಳಿ ರವರ ಮುಂದೆ ವಿಚಾರಣೆ ಇರುವ

PW-1

ಕಾಲಕ್ಕೆ 1 ಎಕರೆ 23 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಸರ್ವೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಆ ಜಮೀನನ್ನು ಅಳತೆ ಮಾಡಿಲ್ಲ, ರೆವಿನ್ಯೂ ಇನ್ಸಪೆಕ್ಟರ್ ರವರು ಸ್ಥಳ ಪರಿಶೀಲನೆ ಮತ್ತು ಮಹಜರ್ ಮಾಡಿಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಆಲಿಸಿ ನೀಡಲಾಯಿತು.**

ಓ ಹೇ ಕೇ ಸರಿ ಇದೆ

(ರಾಧಾ ಎಸ್ )
ಅಧಿಕ ಸಿವಿಲ್ ಜಡ್ಜ್ ಮತ್ತು ಜೆ ಎಂ ಎಫ್ ಸಿ.,
ಕನಕಪುರ .